# ಕರ್ನಾಟಕ ಸರ್ಕಾರ

# ಸಾರಿಗೆ ಇಲಾಖೆ

# TRANSPORT DEPARTMENT

## ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ,

## ದಂಡುಪ್ರದೇಶ, ಹೊಸಪೇಟೆ ರಸ್ತೆ,

## ಬಳ್ಳಾರಿ – 583102

**ಕಛೇರಿ ಪ್ರಾರಂಭವಾದ ದಿನಾಂಕ : 01-10-1953**

DATE OF OFFICE OPENED : 01-10-1953

**ಮಾಹಿತಿ ಹಕ್ಕು ಕಾಯಿದೆ ಅಧಿನಿಯಮ – 2005 ರ**

**4(1)(ಬಿ) ದಾಖಲೆಗಳ ವಿವರ**

**[31-12-2018 ರಲ್ಲಿರುವಂತೆ]**

# ಕರ್ನಾಟಕ ಸರ್ಕಾರ

# ಸಾರಿಗೆ ಇಲಾಖೆ

**ಮಾಹಿತಿ ಹಕ್ಕು ಅಧಿನಿಯಮ 2005 – ಅಧ್ಯಾಯ 2 ನಿಯಮ 4(1)(ಬಿ) ಪ್ರಕಾರ ಪ್ರಕಟಿಸಿದ ಮಾಹಿತಿ**

**4(1)(ಬಿ) ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು**

ಸಂಘಟನೆ : - ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಮತ್ತು ಈ ಕೆಳಕಂಡ ಅಧಿಕಾರಿಗಳು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಾರೆ.

**ಮಂಜೂರಾಗಿರು ಹುದ್ದೆಗಳು**

| | |
|---|---|
| ಅ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | 1 |
| ಆ) ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | 1 |
| ಇ) ಹಿರಿಯ ಮೋಟಾರು ವಾಹನ ನಿರೀಕ್ಷಕರು | 4 |
| ಈ) ಮೋಟಾರು ವಾಹನ ನಿರೀಕ್ಷಕರು | 4 |
| ಉ) ಕಛೇರಿ ಅಧೀಕ್ಷಕರು | 2 |
| ಊ) ಶ್ರೀಘ್ರಲಿಪಿಗಾರರು | 1 |
| ಋ) ಪ್ರಥಮ ದರ್ಜೆ ಸಹಾಯಕರು | 6 |
| ಎ) ಲೆಕ್ಕಿಗರು | 1 |
| ಏ) ದ್ವಿತೀಯ ದರ್ಜೆ ಸಹಾಯಕರು | 10 |
| ಐ) ಬೆರಳಚ್ಚುಗಾರರು | 2 |
| ಒ) ವಾಹನ ಚಾಲಕರು | 2 |
| ಓ) ಅಟೆಂಡರ್ | 1 |
| ಔ) ಗ್ರೂಪ್ 'ಡಿ' ನೌಕರರು | 6 |
| ಅಂ) ಜವಾನ ತಥಾ ರಕ್ಷಕರ | 3 |
| ಒಟ್ಟು | 44 |

ಈ ಕಛೇರಿಯಲ್ಲಿ ಮುಖ್ಯವಾಗಿ ಸಾರಿಗೆ ಮತ್ತು ಸಾರಿಗೇತರ ವಾಹನಗಳ ನೋಂದಣಿ, ತೆರಿಗೆ ವಸೂಲಾತಿ, ಕಲಿಕಾ ಚಾಲನಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾ ಪತ್ರ ಮತ್ತು ವಾಹನಗಳ ಉಪಯೋಗದ ನಿಯಂತ್ರಣದ ಬಗ್ಗೆ ಈ ಕೆಳಕಂಡ ಕಾಯ್ದೆ ನಿಯಮದ ಅಡಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತದೆ.

1. ಮೋಟಾರು ವಾಹನಗಳ ಅಧಿನಿಯಮ 1988
2. ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989
3. ಕರ್ನಾಟಕ ಮೋಟಾರು ವಾಹನ ನಿಯಮಗಳು 1989
4. ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.

<u>ಪ್ರಮುಖ ಕಾರ್ಯಗಳು : -</u>

1. ವಾಹನಗಳ ನೋಂದಣಿ
2. ಚಾಲನಾ ಹಾಗೂ ನಿರ್ವಾಹಕ ಅನುಜ್ಞಾ ಪತ್ರಗಳನ್ನು ನೀಡುವಿಕೆ.
3. ಸರಕು ಸಾಗಣೆ ಹಾಗೂ ಪ್ರಯಣಿಕ ವಾಹನಗಳಿಗೆ ರಹದಾರಿಗಳನ್ನು ನೀಡುವಿಕೆ.
4. ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ.
5. ಮೋಟಾರು ವಾಹನ ನಿಯಮಗಳ ಪ್ರವರ್ತನೆ.
6. ರಸ್ತೆ ಸುರಕ್ಷತಾ ಕ್ರಮಗಳು.
7. ವಾಹನಗಳಿಂದಾಗುವ ವಾಯು ಮಾಲಿನ್ಯ ನಿಯಂತ್ರಣದ ಬಗ್ಗೆ ಪ್ರವರ್ತನೆ.
8. ರಾಜಸ್ವವನ್ನು ಸಂಗ್ರಹಿಸುವುದು.

<u>4(ಬಿ)2 ಅದರ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳು :</u>

<u>ಕಛೇರಿ ವಿಳಾಸ :</u> ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಕಛೇರಿ, ಬಳ್ಳಾರಿ-583102

1. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು : ಕಛೇರಿಯ ಮುಖ್ಯಸ್ಥರಾಗಿದ್ದು, ಕಛೇರಿಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸುತ್ತಾರೆ. ಕಛೇರಿಯ ಯಾವುದೇ ಕೆಲಸಕ್ಕೆ ಸಂಬಂಧಿಸಿದಂತೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಸಿಬ್ಬಂದಿಯ ನಿಯಂತ್ರಣ, ಕೆಲಸದ ಹಂಚಿಕೆಯನ್ನು ಮಾಡುವ ಅಧಿಕಾರವನ್ನು ಸಹ ಹೊಂದಿರುತ್ತಾರೆ. ಹಾಗೆಯೇ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿಯ ಸದಸ್ಯರು ಮತ್ತು ಕಛೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿಯೂ ಸಹ ಕಾರ್ಯನಿರ್ವಹಿಸುತ್ತಾರೆ.
2. ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು : ಸಾರಿಗೇತರ ವಿಭಾಗಕ್ಕೆ ಸಂಬಂಧಿಸಿದಂತೆ ಸಾರಿಗೇತರ ವಾಹನಗಳಾದ ಲಘು ಮೋಟಾರು ವಾಹನಗಳು, ದ್ವಿಚಕ್ರ ವಾಹನಗಳು, ಸರ್ಕಾರಿ ಇಲಾಖಾ ವಾಹನಗಳು, ಟ್ರಾಕ್ಟರ್/ಟ್ರೈಲರ್ ಇತ್ಯಾದಿಗಳ ನೋಂದಣಿ ಹಾಗೂ ವಾಹನಗಳ ಮಾಲೀಕತ್ವ ವರ್ಗಾವಣೆ, ಕಂತುಕರಾರು ನೋಂದಾಯಿಸುವುದು / ರದ್ದುಪಡಿಸುವುದು, ನೋಂದಣಿ ನವೀಕರಣ ಕೆಲಸ, ವಾಹನ ತೆರಿಗೆ ಬಾಕಿದಾರರ ಪಟ್ಟಿಗಳನ್ನು ಸಿದ್ದಪಡಿಸಿ ವಸೂಲಾತಿ ಕ್ರಮದ ಮೇಲ್ವಿಚಾರಣೆ ನಡೆಸುವುದು, ಚಾಲನಾ ಅನುಜ್ಞಾಪತ್ರ, ಕಲಿಕಾ ಚಾಲನಾ ಅನುಜ್ಞಾಪತ್ರ, ಅನುಜ್ಞಾ ನವೀಕರಣೆ, ನಕಲು ಪ್ರತಿ, ಕಂಡಕ್ಟರ್ ಲೈಸೆನ್ಸ್ ನೀಡುವಿಕೆ, ನವೀಕರಣ, ಬ್ಯಾಡ್ಜ್ ಕೋರಿ ಬರುವ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಒಳಪಡಿಸುವುದು, ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಅಭ್ಯರ್ಥಿಗಳಿಗೆ ಚಾಲನಾ ತರಬೇತಿ ನೀಡುವ ಮೇಲ್ವಿಚಾರಣೆ ನಡೆಸುವುದು, ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವುದು, ಸಹಾಯಕ ಮಾಹಿತಿ ಅಧಿಕಾರಿ ಕರ್ತವ್ಯ ನಿರ್ವಹಿಸುವುದು.
3. ಹಿರಿಯ / ಮೋಟಾರು ವಾಹನ ನಿರೀಕ್ಷಕರು : ಮೋಟಾರು ವಾಹನ ಕಾಯ್ದೆ ಹಾಗೂ ನಿಯಮಗಳನುಸಾರ ಸಾರಿಗೆ ವಾಹನಗಳ ನೋಂದಣಿ ನವೀಕರಣ ಹಾಗೂ ಅರ್ಹತಾ ಪತ್ರ ನವೀಕರಣಕ್ಕೆ ಸಂಬಂಧಿಸಿದಮತೆ ವಾಹನವನ್ನು ಪರಿಶೀಲಿಸಿ ಪ್ರಮಾಣ ಪತ್ರ ನೀಡುವುದು ಮತ್ತು ಅಭ್ಯರ್ಥಿಗಳನ್ನು ಪರೀಕ್ಷಿಸಿ ನಿರ್ವಾಹಕ, ಕಲಿಕಾ ಚಾಲನಾ ಅನುಜ್ಞಾ

ಪ್ರಮಾಣ ಪತ್ರ ನೀಡುವುದು, ವಾಹನಗಳ ತಪಾಸಣೆ, ಅಪಘಾತ ವಾಹನಗಳ ವೀಕ್ಷಣೆ, ಬಾಕಿ ತೆರಿಗೆ ವಸೂಲಿ ಸೇರಿದಂತೆ ಇನ್ನಾವುದೇ ಮೇಲಾಧಿಕಾರಿಗಳ ಆದೇಶದಂತೆ ಕಾರ್ಯನಿರ್ವಹಿಸುವುದು.

4. ಲೆಕ್ಕಿಗರು : ಕಛೇರಿಯ ಖಜಾನೆ ವಿಭಾಗದಲ್ಲಿ ಸಾರ್ವಜನಿಕರು ಪಾವತಿಸುವ ತೆರಿಗೆ/ಶುಲ್ಕಗಳಿಗೆ ರಶೀದಿ ನೀಡಿರುವುದು ಹಾಗೂ ಅದರಂತೆ ವಿವರವನ್ನು ನಗದು ವಹಿಯಲ್ಲಿ ದಾಖಲಿಸಿರುವುದನ್ನು ತಾಳೆ ಮಾಡಿ ಲೆಕ್ಕ ಕ್ರಮಬದ್ಧವಾಗಿರುವುದನ್ನು ಪರಿಶೀಲಿಸುವುದು, ರಾಜಸ್ವ ಸಂಗ್ರಹ ಅಂಕಿ-ಅಂಶಗಳನ್ನು ನಿರ್ವಹಣೆ ಮಾಡುವುದು, ವಾಹನಗಳ ಮೇಲಿರುವ ಆಡಿಟ್ ಆಕ್ಷೇಪಣೆಗಳಲ್ಲಿರುವ ಮೊಬಲಗನ್ನು ವಸೂಲಿಸಿ ಮುಕ್ತಾಯಗೊಳಿಸುವ ನಿಟ್ಟಿನಲ್ಲಿ ಕಛೇರಿಯ ಕೆಲಸಕ್ಕಾಗಿ ಬರುವ ಅರ್ಜಿ/ಕಡತಗಳನ್ನು ಎಲ್ಲಾ ಹಂತದಲ್ಲಿ ಪರಿಶೀಲಿಸುವುದು.
5. ಕಛೇರಿ ಅಧೀಕ್ಷಕರು : ಕಛೇರಿಯ ಅಧೀಕ್ಷಕರು ಸಾರ್ವಜನಿಕರು ಸಲ್ಲಿಸುವ ವಿವಿಧ ಕಛೇರಿ ಕೆಲಸಗಳ ಅರ್ಜಿಗಳನ್ನು ಪರಿಶೀಲಿಸಿ ಸ್ವೀಕರಿಸುವುದು. ದೈನಂದಿನ ರಾಜಸ್ವ ವಸೂಲಾತಿಯ ಅಂಕಿ-ಅಂಶಗಳ ಸಂಗ್ರಹಣೆ ಸೇರಿದಂತೆ ಒಟ್ಟಾರೆಯಾಗಿ ಕಛೇರಿಯ ಸಿಬ್ಬಂದಿಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಹಾಗೂ ಮೇಲಾಧಿಕಾರಿಗಳು ನೀಡಿದ ಆದೇಶ ಪಾಲಿಸುವುದು.
6. ಶ್ರೀಘ್ರಲಿಪಿಗಾರರು : ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸವುದು ಮತ್ತು ಕಛೇರಿಯಲ್ಲಿ ನಡೆಯುವ ಎಲ್ಲಾ ಸಭೆಗಳ ಸೂಚಿಪಟ್ಟಿ ಮತ್ತು ನಡಾವಳಿಗಳನ್ನು ತಯಾರಿಸುವುದು.
7. ಪ್ರಥಮ/ದ್ವಿತೀ ದರ್ಜೆ ಸಹಾಯಕರು : ಕಛೇರಿಯ ಅಧೀಕ್ಷಕರು/ಮೇಲಾಧಿಕಾರಿಗಳು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಕಡತದೊಂದಿಗೆ ಮುಂದಿನ ಆದೇಶಕ್ಕಾಗಿ ಕಛೇರಿ ಅಧೀಕ್ಷಕರಿಗೆ ಸಲ್ಲಿಸುವುದು. ಕಡತದಲ್ಲಿ ಮೇಲಾಧಿಕಾರಿಗಳು ನೀಡಿದ ಆದೇಶವನ್ನು ಪಾಲಿಸಿ ಸಾರ್ವಜನಿಕರ ಕೆಲಸಕಾರ್ಯಗಳನ್ನು ನಿರ್ವಹಿಸುವುದು.
8. ಬೆರಳಚ್ಚುಗಾರರು : ಕಛೇರಿಯಿಂದ ಹೊರಡಿಸುವ ಎಲ್ಲಾ ಪತ್ರಗಳನ್ನು ಬೆರಳಚ್ಚು ಮಾಡುವುದು. ರಹದಾರಿ ಪರವಾನಿಗೆಗಳನ್ನು ಬೆರಳಚ್ಚಿಸುವುದು ಹಾಗೂ ಮೇಲಾಧಿಕಾರಿಗಳು ಹೇಳಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.
9. ವಾಹನ ಚಾಲಕರು : ಕಛೇರಿಯ ಎಲ್ಲಾ ಕೆಲಸ ಕಾರ್ಯಗಳಿಗೆ ನಿಗಧಿಪಡಿಸಿದ ವಾಹನವನ್ನು ಚಲಾಯಿಸುವುದು.
10. 'ಡಿ' ಗ್ರೂಪ್ ನೌಕರರು (ಜವಾನರು) : ಸ್ಥಳೀಯ ಟಪಾಲನ್ನು ವಿತರಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶದ ಮೇರೆಗೆ ಕೆಲಸ ನಿರ್ವಹಿಸವುದು.

**4(ಬಿ)3 ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು**

ಸಾರ್ವಜನಿಕರು ವಿವಿಧ ಕೆಲಸಗಳಿಗಾಗಿ ಕಛೇರಿಗೆ ಸಲ್ಲಿಸುವ ಅರ್ಜಿಗಳನ್ನು ನಿಯಮಾನುಸಾರ ಕಛೇರಿಯಲ್ಲಿನ ಅಧೀಕ್ಷಕರುಗಳು ಪರಿಶೀಲಿಸಿ ಸ್ವೀಕರಿಸಿರುತ್ತಾರೆ. ತದನಂತರ ಕಛೇರಿಯ ಸ್ವೀಕೃತಿ ವಿಭಾಗದ ಮುಖಾಂತರ ಆಯಾ ವಿಭಾಗಗಳನ್ನು ನಿರ್ವಹಿಸುವ ವಿಷಯ ನಿರ್ವಾಹಕರು ತಮಗೆ ಸಂಬಂಧಿಸಿದ ಅರ್ಜಿಗಳನ್ನು ಕಡತದಲ್ಲಿ ಟಿಪ್ಪಣಿಯೊಂದಿಗೆ ವಿಷಯವನ್ನು ಮಂಡಿಸುತ್ತಾರೆ. ನಂತರ ಅದನ್ನು ಸಂಬಂಧಿಸಿದ ಅಧೀಕ್ಷಕರು ಪರಿಶೀಲಿಸಿ ತಮ್ಮ ಟಿಪ್ಪಣಿಯನ್ನು ಮಂಡಿಸಿದ ನಂತರ ಅಂತಿಮವಾಗಿ ಸಕ್ಷಮ ಪ್ರಾಧಿಕಾರದ ಅಧಿಕಾರಸ್ಥರು ಸದರಿ ವಿಷಯದ

ಕಡತಕ್ಕೆ ತಮ್ಮ ತೀರ್ಮಾನದ ಆದೇಶವನ್ನು ನೀಡುತ್ತಾರೆ. ಸದರಿಯವರು ನೀಡಿದ ಆದೇಶವನ್ನು ಅಂತಿಮವಾಗಿ ವಿಷಯ ನಿರ್ವಾಹಕರು ಮತ್ತು ಅಧೀಕ್ಷಕರುಗಳು ಪಾಲಿಸುತ್ತಾರೆ ಮತ್ತು ಸಂಬಂಧಿಸಿದ ಕಡತಗಳನ್ನು ನಿರ್ವಹಿಸುತ್ತಿರುತ್ತಾರೆ.

ಕೆಲವೊಂದು ವಿಷಯಗಳಿಗೆ ಸಂಬಂಧಿಸಿದ ಕೆಲಸಗಳಿಗೆ ಕಛೇರಿಯ ತಾಂತ್ರಿಕ ಸಿಬ್ಬಂದಿಗಳಾದ ಹಿರಿಯ/ಮೋಟಾರು ವಾಹನ ನಿರೀಕ್ಷಕರುಗಳ ಪರಿಶೀಲನೆ ಅವಶ್ಯಕವಾಗಿದ್ದು, ಅಂತಹ ಅರ್ಜಿಗಳನ್ನು ಕಛೇರಿ ಅಧೀಕ್ಷಕರು ಪರಿಶೀಲಿಸಿ ಸ್ವೀಕರಿಸಿದ ನಂತರ ತಾಂತ್ರಿಕ ಸಿಬ್ಬಂದಿಗಳು ತಾವು ಸಹ ವಾಹನವನ್ನು/ಅಭ್ಯರ್ಥಿಗಳನ್ನು ಭೌತಿಕವಾಗಿ ತಾಂತ್ರಿಕವಾಗಿ ಪರಿಶೀಲಿಸಿ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳಿಗೆ ಶಿಫಾರಸ್ಸುಗಳೊಂದಿಗೆ ಮಂಡಿಸುತ್ತಾರೆ. ಅಂತಿಮವಾಗಿ ಸಕ್ಷಮ ಪ್ರಾಧಿಕಾರದ ಅಧಿಕಾರಸ್ಥರು ತೀರ್ಮಾನ ತೆಗೆದುಕೊಂಡು ಅಂತಹ ಕಡತಗಳಿಗೆ ಆದೇಶ ಮಾಡುತ್ತಾರೆ. ಸದರಿಯವರ ಆದೇಶವನ್ನು ವಿಷಯ ನಿರ್ವಾಹಕರು ಹಾಗೂ ಅಧೀಕ್ಷಕರುಗಳು ಅಂತಿಮವಾಗಿ ಪಾಲಿಸುತ್ತಾರೆ. ಮತ್ತು ಸಂಬಂಧಿಸಿದ ಕಡತಗಳನ್ನು ನಿರ್ವಹಿಸುತ್ತಾರೆ.

**4(ಬಿ)4 ಅದರ ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳು :**

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಅವರ ಅಧೀನದಲ್ಲಿ ಬರುವ ಸಿಬ್ಬಂದಿಯವರು ಈ ಕೆಳಕಂಡ ಕಾಯ್ದೆ ಮತ್ತು ನಿಯಮದಡಿಯಲ್ಲಿ ಕರ್ತವ್ಯ ನಿರ್ವಹಿಸಲಾಗುತ್ತದೆ.

1. ಮೋಟಾರು ವಾಹನಗಳ ಅಧಿನಿಯಮ 1988
2. ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989
3. ಕರ್ನಾಟಕ ಮೋಟಾರು ವಾಹನ ನಿಯಮಗಳು 1989
4. ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.

**4(ಬಿ)5 ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು :**

1. ಕೇಂದ್ರ ಮೋಟಾರು ವಾಹನಗಳ ಕಾಯ್ದೆ 1988
2. ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989
3. ಕರ್ನಾಟಕ ಮೋಟಾರು ವಾಹನ ನಿಯಮಗಳು 1989
4. ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.
5. ಕೆ.ಸಿ.ಎಸ್.ಆರ್
6. ಸಿ.ಸಿ.ಎ
7. ಕೆ.ಎಫ್.ಸಿ
8. ಕೆ.ಟಿ.ಸಿ
9. ಕಛೇರಿ ಕೈಪಿಡಿ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಅಧಿಸೂಚನೆಗಳು, ಸುತ್ತೋಲೆಗಳು ಮತ್ತು ಇತರೆ ಆದೇಶ ಸೂಚನೆ ಸಲಹೆಗಳನ್ವಯ ನಾಗರೀಕ ಸನ್ನಧಿನಲ್ಲಿ ಸೂಚಿಸಲ್ಪಟ್ಟಂತೆ ನಿಯಮಗಳು, ಅಧಿನಿಯಮಗಳು ಮತ್ತು ವಿಧಾನಗಳನ್ನು ಅಳವಡಿಸಿಕೊಂಡಂತೆ ಕಾರ್ಯನಿರ್ವಹಿಸಲಾಗುತ್ತಿದೆ.

**4(ಬಿ)6 ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ**

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ಅಧೀನ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರ ಅರ್ಜಿಗಳನ್ನು ಪರಿಶೀಲಿಸಿ ಈ ಕೆಳಕಂಡ ಪ್ರಮುಖ ಕಾರ್ಯಗಳನ್ನು ನಿರ್ವಹಿಸಿ ಕೆಳಕಂಡ ದಸ್ತಾವೇಜುಗಳನ್ನು ಹೊಂದಿರುತ್ತಾರೆ.

1. ವಾಹನಗಳ ನೋಂದಣಿ ವಿವರಗಳು.
2. ಚಾಲನಾ ಹಾಗೂ ನಿರ್ವಾಹಕ ಅನುಜ್ಞಾಪತ್ರಗಳನ್ನು ನೀಡಿರುವ ವಿವರಗಳು
3. ಸರಕು ಸಾಗಣೆ ಹಾಗೂ ಪ್ರಯಾಣಿಕ ವಾಹನಗಳಿಗೆ ರಹದಾರಿಗಳನ್ನು ನೀಡಿರುವ ವಿವರಗಳು.
4. ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ ವಿವರಗಳು.
5. ಮೋಟಾರು ವಾಹನ ನಿಯಮಗಳ ಪ್ರವರ್ತನ ಚಟುವಟಿಕೆ ವಿವರಗಳು.
6. ರಸ್ತೆ ಸುರಕ್ಷತಾ ಕ್ರಮಗಳು.
7. ವಾಹನಗಳಿಂದಾಗುವ ವಾಯು ಮಾಲಿನ್ಯ ನಿಯಂತ್ರಣದ ಬಗ್ಗೆ ಪ್ರವರ್ತನ ವಿವರಗಳು.
8. ರಾಜಸ್ವವನ್ನು ಸಂಗ್ರಹಿಸಿದ ವಿವರಗಳು.

ಈ ಕಛೇರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮುಖ್ಯಸ್ಥರಾಗಿ ಆಡಳಿತ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

**4(ಬಿ)7 ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ**

ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅದರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ಯಾವುದೇ ವ್ಯವಸ್ಥೆಯ ವಿವರಗಳು.

ಸಹಾಯಕ ಮೇಜು, ಸಾರ್ವಜನಿಕ ಸಂಪರ್ಕಾಧಿಕಾರಿ, ಸಲಹಾ ದೂರು ಪೆಟ್ಟಿಗೆ, ಪ್ರತಿ ಮಾಹೆ ನಿರ್ವಹಿಸುವ ಸಾರ್ವಜನಿಕ ಕುಂದುಕೊರತೆ ಮತ್ತು ಫೋನ್ ಇನ್ ಕಾರ್ಯಕ್ರಮಗಳು, ಇತ್ಯಾದಿ

| | |
|---|---|
| ಸಹಾಯಕ ಮೇಜುವಿನಲ್ಲಿ | 02 ಅಧೀಕ್ಷಕರು<br>01 ಸಹಾಯಕರು<br>01 'ಡಿ' ಗ್ರೂಪ್ ನೌಕರುಗಳು ಸಾರ್ವಜನಿಕರಿಗೆ ಅವಶ್ಯವಾದ ಇಲಾಖೆಗೆ ಸಂಬಂಧಪಟ್ಟ ಎಲ್ಲಾ [ಅರ್ಜಿ ನಮೂನೆಗಳನ್ನು ನೀಡುವುದರ ಜೊತೆಗೆ ಸಾರ್ವಜನಿಕ] ಕೆಲಸ ಕಾರ್ಯಗಳು ಸುಸೂತ್ರವಾಗಿ ಆಗಲು ಕರ್ತವ್ಯ ನಿರ್ವಹಿಸುತ್ತಾರೆ. |
| ಸಾರ್ವಜನಿಕ ಸಂಪರ್ಕಾಧಿಕಾರಿ | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಡಿ.ಎಲ್.ವಿಭಾಗ) |
| ದೂರವಾಣಿ ಸಂಖ್ಯೆ | 08392-240048 |
| ಇ ಮೇಲ್ | rtoblr-ka@nic.in |

4(ಬಿ)8. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಯಮಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಯತಕಾಲಿಕೆ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ. ಬಳ್ಳಾರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ.

ಪ್ರಾಧಿಕಾರವು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

1. ಅಧ್ಯಕ್ಷರು, ಜಿಲ್ಲಾಧಿಕಾರಿಗಳು.
2. ಸದಸ್ಯರು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು.
3. ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಅಧಿಕಾರಿ

ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬಳ್ಳಾರಿ-583102 ಕರ್ನಾಟಕ ಮೋಟಾರು ವಾಹನ ನಿಯಮ 1989 ನಿಯಮ (55) ರ ಅಡಿಯಲ್ಲಿ ಸಾರಿಗೆ ವಾಹನಗಳ ರಹದಾರಿ ನೀಡುವ ಅಧಿಕಾರ ಹೊಂದಿರುತ್ತಾರೆ. ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಕಾಲಕಾಲಕ್ಕೆ ಸಭೆ ನಡೆಸುತ್ತಿದ್ದು, ಈ ಸಭೆಗಳ ಎಲ್ಲಾ ನಡಾವಳಿಗಳು ಸಾರ್ವಜನಿಕರಿಗೆ ಲಭ್ಯವಿರುತ್ತವೆ ಮತ್ತು ಕೋರಿದಾಗ ಅವುಗಳ ಪ್ರತಿ ನೀಡಲಾಗುತ್ತಿದೆ.

ಜಿಲ್ಲಾಧಿಕಾರಿಗಳು, ಅಧ್ಯಕ್ಷರಾಗಿರುವ ಜಿಲ್ಲಾ ರಸ್ತೆ ಮತ್ತು ಸುರಕ್ಷತಾ ಸಮಿತಿಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ.

<u>ಸದಸ್ಯರುಗಳು</u>

1) ಪೋಲೀಸ್ ಅಧೀಕ್ಷಕರು, ಬಳ್ಳಾರಿ ನಗರ, ಬಳ್ಳಾರಿ.
2) ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪರಿಷತ್, ಬಳ್ಳಾರಿ.
3) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಳ್ಳಾರಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ.
4) ಪ್ರಾದೇಶಿಕ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬಳ್ಳಾರಿ
5) ಸಹಾಯಕ ನಿರ್ದೇಶಕರು, ಪಟ್ಟಣ ಯೋಜನೆ, ಬಳ್ಳಾರಿ.
6) ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ
7) ಜಿಲ್ಲಾ ವಾರ್ತಾ ಪ್ರಚಾರಾಧಿಕಾರಿಗಳು, ಬಳ್ಳಾರಿ

<u>ಸದಸ್ಯ ಕಾರ್ಯದರ್ಶಿ</u>

8) ಪ್ರಾದೇಶಿಕ ಸಾರಿಗೆ ಅಧಿಕಾರಿ, ಬಳ್ಳಾರಿ.

4(ಬಿ) 9 ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ

| ಕ್ರ. ಸಂ. | ಪದನಾಮ | ಹುದ್ದೆ | ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀಧರ್ ಕೆ. ಮಲ್ಲಾಡ | ಪ್ರಾ.ಸಾ.ಅ | 08392-240048 |
| 2 | ಬಿ.ಲಕ್ಷ್ಮಿಕಾಂತ ನಲವರ<br>ದಿ : 16-08-2018 ರಂದು<br>ವರ್ಗಾವಣೆಗೊಂಡಿರುತ್ತಾರೆ. | ಸ.ಪ್ರಾ.ಸಾ.ಅ | 08392-240048 |
| 3 | ಶ್ರೀ ಪಿ.ವೆಂಕಟರಮಣರೆಡ್ಡಿ | ಹಿ.ಮೋ.ವಾ.ನಿ | 08392-240048 |
| 4 | ಶ್ರೀ ಶಿವಶಂಕರ್,<br>ದಿ : 27-07-2017 ವರ್ಗಾವಣೆ ನಿಮಿತ್ತ ಕಛೇರಿ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. | ಹಿ.ಮೋ.ವಾ.ನಿ | 08392-240048 |
| 5 | ಶ್ರೀ ಹೆಚ್.ಎ.ಇಕ್ಬಾಲ್<br>ದಿ : 30-04-2018 ರಂದು ನಿವೃತ್ತಿ | ಹಿ.ಮೋ.ವಾ.ನಿ | 08392-240048 |
| 6 | ರಿಕ್ತ | ಮೋ.ವಾ.ನಿ | 08392-240048 |
| 7 | ರಿಕ್ತ | ಮೋ.ವಾ.ನಿ | 08392-240048 |
| 8 | ರಿಕ್ತ | ಮೋ.ವಾ.ನಿ | 08392-240048 |
| 9 | ರಿಕ್ತ | ಮೋ.ವಾ.ನಿ | 08392-240048 |
| 10 | ಶ್ರೀ ವೀರಭದ್ರಪ್ಪ<br>ದಿ : 9-3-2018 ನಿಯೋಜನೆ ಆರ್.ಟಿ.ಓ. ಬೀದರ್ | ಅಧೀಕ್ಷಕರು | 08392-240048 |
| 11 | ಶ್ರೀ ವೀರೇಶ್ | ಅಧೀಕ್ಷಕರು | 08392-240048 |
| 12 | ಶ್ರೀ ಆರ್.ಬಿ.ದಿವಾನಜಿ<br>ದಿ : 9-1-2009 ನಿಯೋಜನೆ ಆರ್.ಟಿ.ಓ. ಯಾದಗಿರಿ | ಶ್ರೀಘ್ರಲಿಪಿಗಾರರು | 08392-240048 |
| 13 | ರಿಕ್ತ | ಲೆಕ್ಕಿಗರು | 08392-240048 |
| 14 | ಶ್ರೀ ಬಿರಾನಿ ಖಾಜ ಭಾಷ | ಪ್ರ.ದ.ಸ | 08392-240048 |
| 15 | ಶ್ರೀ ಸಿ.ಎನ್.ಗೌಡ | ಪ್ರ.ದ.ಸ | 08392-240048 |
| 16 | ಶ್ರೀ ಎಂ.ಮಂಜುನಾಥ | ಪ್ರ.ದ.ಸ | 08392-240048 |
| 17 | ಶ್ರೀ ಸಿ.ಎಸ್.ಗುಡಿಮನಿ | ಪ್ರ.ದ.ಸ | 08392-240048 |
| 18 | ಶ್ರೀಮತಿ ಸಂಗೀತ | ಪ್ರ.ದ.ಸ | 08392-240048 |
| 19 | ಶ್ರೀ ನಾಸೀರ್ ಹುಸೇನ್<br>ದಿ : 15-09-2018 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ | ಪ್ರ.ದ.ಸ | 08392-240048 |

| ಕ್ರ. ಸಂ. | ಪದನಾಮ | ಹುದ್ದೆ | ದೂರವಾಣಿ ಸಂಖ್ಯೆ |
|---|---|---|---|
| **20** | ಶ್ರೀ ಎಂ.ಸಣ್ಣಮಾರೆಣ್ಣ<br>ದಿ :**31-05-2018** ರಂದು ವಯೋ ನಿವೃತ್ತಿ ಹೊಂದಿರುತ್ತಾರೆ. | ದ್ವಿ.ದ.ಸ | **08392-240048** |
| **21** | ಶ್ರೀ ಸಿ.ಲಕ್ಷ್ಮಣ ಹೆಬ್ಬಳ್ಳಿ | ದ್ವಿ.ದ.ಸ | **08392-240048** |
| **22** | ಶ್ರೀ ನಾಗೇಶ್ ಕುಮಾರ್. ಎನ್ | ದ್ವಿ.ದ.ಸ | **08392-240048** |
| **23** | ಕುಮಾರಿ ಬಿ.ಸಿ.ಶ್ರೀದೇವಿ<br>ನಿಯೋಜನೆ ದಿ : **03-0-2018** ಆರ್.ಟಿ.ಓ ಹೊಸಪೇಟೆ | ದ್ವಿ.ದ.ಸ | **08392-240048** |
| **24** | ರಿಕ್ತ | ದ್ವಿ.ದ.ಸ | **08392-240048** |
| **25** | ರಿಕ್ತ | ದ್ವಿ.ದ.ಸ | **08392-240048** |
| **26** | ರಿಕ್ತ | ದ್ವಿ.ದ.ಸ | **08392-240048** |
| **27** | ರಿಕ್ತ | ದ್ವಿ.ದ.ಸ | **08392-240048** |
| **28** | ರಿಕ್ತ | ದ್ವಿ.ದ.ಸ | **08392-240048** |
| **29** | ರಿಕ್ತ | ದ್ವಿ.ದ.ಸ | **08392-240048** |
| **30** | ರಿಕ್ತ | ಬೆರಳಚ್ಚುಗಾರರು | **08392-240048** |
| **31** | ರಿಕ್ತ | ಬೆರಳಚ್ಚುಗಾರರು | **08392-240048** |
| **32** | ಶ್ರೀ ವೆಂಕಟೇಶ .ವಿ | ವಾಹನ ಚಾಲಕರು | **08392-240048** |
| **33** | ಶ್ರೀ ಕೆ.ಎಂ.ವೀರೇಶ್ | ವಾಹನ ಚಾಲಕರು | **08392-240048** |
| **34** | ಶ್ರೀ ನಾಗೇಶ<br>ಅನಧಿಕೃತ ಗೈರು ಹಾಜರಿ | ಅಟೆಂಡರ್ | **08392-240048** |
| **35** | ರಿಕ್ತ | ಖಜಾನೆ ತಥಾ ರಕ್ಷಕ | **08392-240048** |
| **36** | ರಿಕ್ತ | ಖಜಾನೆ ತಥಾ ರಕ್ಷಕ | **08392-240048** |
| **37** | ರಿಕ್ತ | ಖಜಾನೆ ತಥಾ ರಕ್ಷಕ | **08392-240048** |
| **38** | ಶ್ರೀ ಬಸವನಗೌಡ | 'ಡಿ' ಗ್ರೂಪ್ | **08392-240048** |
| **39** | ಶ್ರೀ ಬಸಪ್ಪ<br>ದಿ : **30-06-2018** ರಂದು ವಯೋ ನಿವೃತ್ತಿ ಹೊಂದಿರುತ್ತಾರೆ. | 'ಡಿ' ಗ್ರೂಪ್ | **08392-240048** |
| **40** | ರಿಕ್ತ | 'ಡಿ' ಗ್ರೂಪ್ | **08392-240048** |
| **41** | ರಿಕ್ತ | 'ಡಿ' ಗ್ರೂಪ್ | **08392-240048** |
| **42** | ರಿಕ್ತ | 'ಡಿ' ಗ್ರೂಪ್ | **08392-240048** |
| **43** | ರಿಕ್ತ | 'ಡಿ' ಗ್ರೂಪ್ | **08392-240048** |

**4(ಬಿ) 10 ಅದರ ವಿ.ನಿಯಮಗಳಲ್ಲಿ ಉಪ ಸಂಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡಿಯುವ ತಿಂಗಳ ವೇತನ**

| ಕ್ರ. ಸಂ. | ಪದನಾಮ | ಹುದ್ದೆ | ವೇತನ |
|---|---|---|---|
| 1 | ಶ್ರೀಧರ ಕೆ. ಮಲ್ಲಾಡ | ಪ್ರಾ.ಸಾ.ಅ | ಮೂಲ ವೇತನ ರೂ 53900/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 2 | ಶ್ರೀ ಪಿ.ವೆಂಕಟರಮಣರೆಡ್ಡಿ | ಹಿ.ಮೋ.ವಾ.ನಿ | ಮೂಲ ವೇತನ ರೂ 55350/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 3 | ರಿಕ್ತ | ಮೋ.ವಾ.ನಿ | ------ |
| 4 | ರಿಕ್ತ | ಮೋ.ವಾ.ನಿ | ------ |
| 5 | ರಿಕ್ತ | ಮೋ.ವಾ.ನಿ | ------ |
| 6 | ರಿಕ್ತ | ಮೋ.ವಾ.ನಿ | ------ |
| 7 | ಶ್ರೀ ವೀರಭದ್ರಪ್ಪ | ಅಧೀಕ್ಷಕರು | ಮೂಲ ವೇತನ ರೂ 48900/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 8 | ಶ್ರೀ ವೀರೇಶ್ | ಅಧೀಕ್ಷಕರು | ಮೂಲ ವೇತನ ರೂ 34300/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 9 | ಶ್ರೀ ಆರ್.ಬಿ.ದಿವಾನಜಿ | ಶ್ರೀಘ್ರಲಿಪಿಗಾರರು | ಮೂಲ ವೇತನ ರೂ 47650/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 10 | ರಿಕ್ತ | ಲೆಕ್ಕಿಗರು | ------ |
| 11 | ಶ್ರೀ ಬಿರಾನಿ ಖಾಜ ಭಾಷ | ಪ್ರ.ದ.ಸ | ಮೂಲ ವೇತನ ರೂ 29600/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 12 | ಶ್ರೀ ಸಿ.ಎನ್.ಗೌಡ | ಪ್ರ.ದ.ಸ | ಮೂಲ ವೇತನ ರೂ 29600/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 13 | ಶ್ರೀ ಎಂ.ಮಂಜುನಾಥ | ಪ್ರ.ದ.ಸ | ಮೂಲ ವೇತನ ರೂ 40900/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 14 | ಶ್ರೀ ಸಿ.ಎಸ್.ಗುಡಿಮನಿ | ಪ್ರ.ದ.ಸ | ಮೂಲ ವೇತನ ರೂ 34300/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 15 | ಶ್ರೀಮತಿ ಸಂಗೀತ | ಪ್ರ.ದ.ಸ | ಮೂಲ ವೇತನ ರೂ 28950/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 16 | ರಿಕ್ತ | ಪ್ರ.ದ.ಸ | ------ |
| 17 | ರಿಕ್ತ | ದ್ವಿ.ದ.ಸ | ------ |
| 18 | ಶ್ರೀ ಸಿ.ಲಕ್ಷ್ಮಣ ಹೆಬ್ಬಳ್ಳಿ | ದ್ವಿ.ದ.ಸ | ಮೂಲ ವೇತನ ರೂ 24600/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |

| ಕ್ರ. ಸಂ. | ಪದನಾಮ | ಹುದ್ದೆ | ವೇತನ |
|---|---|---|---|
| 19 | ಶ್ರೀ ನಾಗೇಶ್ ಕುಮಾರ್. ಎನ್ | ದ್ವಿ.ದ.ಸ | ಮೂಲ ವೇತನ ರೂ 25200/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 20 | ಶ್ರೀಮತಿ ಬಿ.ಸಿ.ಶ್ರೀದೇವಿ | ದ್ವಿ.ದ.ಸ | ಮೂಲ ವೇತನ ರೂ 21400/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 21 | ರಿಕ್ತ | ದ್ವಿ.ದ.ಸ | ------ |
| 22 | ರಿಕ್ತ | ದ್ವಿ.ದ.ಸ | ------ |
| 23 | ರಿಕ್ತ | ದ್ವಿ.ದ.ಸ | ------ |
| 24 | ರಿಕ್ತ | ದ್ವಿ.ದ.ಸ | ------ |
| 25 | ರಿಕ್ತ | ದ್ವಿ.ದ.ಸ | ------ |
| 26 | ರಿಕ್ತ | ದ್ವಿ.ದ.ಸ | ------ |
| 27 | ರಿಕ್ತ | ಬೆರಳಚ್ಚುಗಾರರು | ------ |
| 28 | ರಿಕ್ತ | ಬೆರಳಚ್ಚುಗಾರರು | ------ |
| 29 | ಶ್ರೀ ವೆಂಕಟೇಶ | ವಾಹನ ಚಾಲಕರು | ಮೂಲ ವೇತನ ರೂ 36000/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 30 | ಶ್ರೀ ಕೆ.ಎಂ.ವೀರೇಶ್ | ವಾಹನ ಚಾಲಕರು | ಮೂಲ ವೇತನ ರೂ 24600/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 31 | ಶ್ರೀ ನಾಗೇಶ<br>ಅನಧಿಕೃತ ಗೈರು ಹಾಜರಿ | ಅಟೆಂಡರ್ | ಮೂಲ ವೇತನ ರೂ ________<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 32 | ರಿಕ್ತ | ಖಜಾನೆ ತಥಾ ರಕ್ಷಕ | ------ |
| 33 | ರಿಕ್ತ | ಖಜಾನೆ ತಥಾ ರಕ್ಷಕ | ------ |
| 34 | ರಿಕ್ತ | ಖಜಾನೆ ತಥಾ ರಕ್ಷಕ | ------ |
| 35 | ಶ್ರೀ ಬಸವನಗೌಡ | 'ಡಿ' ಗ್ರೂಪ್ | ಮೂಲ ವೇತನ ರೂ 34300/-<br>ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 36 | ರಿಕ್ತ | 'ಡಿ' ಗ್ರೂಪ್ | ------ |
| 37 | ರಿಕ್ತ | 'ಡಿ' ಗ್ರೂಪ್ | ------ |
| 38 | ರಿಕ್ತ | 'ಡಿ' ಗ್ರೂಪ್ | ------ |
| 39 | ರಿಕ್ತ | 'ಡಿ' ಗ್ರೂಪ್ | ------ |
| 40 | ರಿಕ್ತ | 'ಡಿ' ಗ್ರೂಪ್ | ------ |

**4(ಬಿ) <u>11 ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಗೆ ಮಾಡಲಾದ ಆಯವ್ಯ ಅನುದಾನ ಬಿಡುಗಡೆ – 2018-19 (31-03-2019)</u>**

| ಲೆಕ್ಕ ಶೀರ್ಷಿಕೆ | ಅನುದಾನ ಬಿಡಗಡೆ | ಖರ್ಚಿನ ಬಾಬ್ತು | ಉಳಿದ ಹಣ |
|---|---|---|---|
| ಸಾಮಾನ್ಯ ವೆಚ್ಚಗಳು – 051 | 1400000.00 | 964380.00 | 435620.00 |
| ಕಟ್ಟಡ ವೆಚ್ಚ – 071 | 450000.00 | 206079.00 | 243921.00 |
| ಇಂಧನ ವೆಚ್ಚ - 195 | 400000.00 | 393563.00 | 6437.00 |
| ರಾಷ್ಟ್ರೀಯ ರಜೆ - 059 | 200000.00 | 194175.00 | 5825.00 |
| ವೈದ್ಯಕೀಯ ವೆಚ್ಚ - 021 | 100000.00 | 73836.00 | 26164.00 |
| ವಾಯು ಮಾಲಿನ್ಯ - 059 | 15000.00 | 14460.00 | 540.00 |
| ಪ್ರಯಾಣ ಭತ್ಯೆ | 20000.00 | 0.00 | 20000.00 |

**4(ಬಿ) <u>14 ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹತಿಗೆ ಸಂಬಂಧಿಸಿದ ವಿವರಗಳು.</u>**

ವಾಹನಗಳ ನೋಂದಣಿ, ಚಾಲನಾ ಅನುಜ್ಞಾಪತ್ರ, ಚಾಲನಾ ಅನುಜ್ಞಾ ಪತ್ರದ ನವೀಕರಣ, ಹೆಚ್ಚುವರಿ ವಾಹನ ಚಾಲನೆಗೆ ಹಿಂಬರದ ಶುಲ್ಕ ಪಾವತಿ, ತೆರಿಗೆ ಪಾವತಿ, ರಹದಾರಿ ವಿವರ ಇತ್ಯಾದಿಗಳ ನಿರ್ದಿಷ್ಟಪಡಿಸಿ NIC (ಎನ್.ಐ.ಸಿ) ಯವರು ತಯಾರಿಸಿದ ತಂತ್ರಾಂಶ ಸಹಾಯದಿಂದ ಗಣಕೀರಣಗೊಳಿಸಿ ವಾಹನ, ಸಾರಥಿ ಹಾಗೂ ರಹದಾರಿ ಸಾಫ್ಟ್ ವೇರ್‌ಗಳ ಸಹಾಯದಿಂದ ಈಗಾಗಲೇ ಆರ್ ಸಿ ರೂಪದ 341147, ಡಿ.ಎಲ್.ರೂಪದ 271012 ಹಾಗೂ ರಹದಾರಿ ರೂಪದ 21484 ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಲಾಗಿದೆ.

**4(ಬಿ) <u>15 ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು</u>**

ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯ ಈವರೆಗೆ ಅಸ್ತಿತ್ವದಲ್ಲಿ ಇರುವುದಿಲ್ಲ.

4(ಬಿ) 16 ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರ ವಿವರಗಳು

1. ಸಾರ್ವಜನಿಕ ಮಾಹಿತಿ ಅಧಿಕಾರಿ ಶ್ರೀ ಬಿ.ಎಸ್.ಶ್ರೀನಿವಾಸಗಿರಿ, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬಳ್ಳಾರಿ-583102.
2. ಮೇಲ್ಮನವಿ ಪ್ರಾಧಿಕಾರ ಶ್ರೀ ಪುರುಷೋತ್ತಮ .ಜೆ., ಜಂಟಿ ಸಾರಿಗೆ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ-585105

ಅ) ಈ ಕಛೇರಿಗೆ 2018-19 ನೇ ಸಾಲಿನಲ್ಲಿ ಒಟ್ಟು ರೂ. 54.48 ಕೋಟಿಗಳು ರಾಜಸ್ವ ಗುರಿ ನಿಗಧಿಪಡಿಸಲಾಗಿದ್ದು, ಡಿಸೆಂಬರ್ – 2018ಕ್ಕೆ ಒಟ್ಟು ರೂ. 1846493/- ನ್ನು ವಸೂಲಿ ಮಾಡಲಾಗಿದ್ದು, 108% ಗುರಿಯನ್ನು ಮುಟ್ಟಲಾಗಿದೆ.
ಆ) ಕೇಂದ್ರ ಕಛೇರಿಯಾದ ಮಾನ್ಯ ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರಿನಿಂದ ಬಿಡುಗಡೆಯಾದ ವೆಬ್ ಸೈಟ್ www.rto.kar.nic.in ರಲ್ಲಿ ಹಾಗೂ ಚಾಲನಾ ಅನುಜ್ಞಾ ಪತ್ರಕ್ಕೆ ಸಂಬಂಧಿಸಿದಂತೆ www.sarathi.nic.in ಮತ್ತು ವಾಹನಗಳ ವಿವರಗಳಿಗೆ www.vahan.nic.in ರಲ್ಲಿ ಪರಿಶೀಲಿಸಿ ಮಾಹಿತಿ ಪಡೆದು ಸಾರ್ವಜನಿಕರು ತಮ್ಮ ಕೆಲಸಕಾರ್ಯಗಳಿಗೆ ಅನುಸರಿಸಬೇಕಾದ ಸೂಕ್ತ ಮಾರ್ಗದರ್ಶನ ಪ್ರಕಟಿಸಲಾಗಿದೆ.

4(ಬಿ) 17 ಕಛೇರಿಯಲ್ಲಿ ನಿರ್ವಹಿಸಲಾಗಿರುವ ಎಲ್ಲಾ ಮಾಹಿತಿಗಳನ್ನು ಪ್ರಕಟಿಸಲಾಗಿದೆ. ಮತ್ತು ಮಾಹಿತಿಗಳನ್ನು 31-03-2018 ರವರೆಗೆ ಪರಿಷ್ಕರಿಸಲಾಗಿದೆ.

(SHREEDHAR K.MALLADA)
Regional Transport Officer,
Ballari-583103
Ph.No. 08392-240048

(ಶ್ರೀಧರ್ ಕೆ.ಮಲ್ಲಾಡ)
ಪ್ರಾದೇಶಿಕ ಸಾರಿಗೆ ಅಧಿಕಾರಿ,
ಬಳ್ಳಾರಿ – 583103
ಮೋ: 9449864034

<u>ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿ ವಿವರ</u>

| ಸಾರ್ವಜನಿಕ ಪ್ರಾಧಿಕಾರ | ಮಾಹಿತಿ ಹಕ್ಕು ಅಧಿನಿಯಮ 2005 ರ (5)(1) ರ ಅನುಸಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಹಕ್ಕು ಅಧಿನಿಯಮ 2005 ರ (5)(2) ರ ಅನುಸಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಹಕ್ಕು ಅಧಿನಿಯಮ 2005 ರ (19)(2) ರ ಅನುಸಾರ ಮೇಲ್ಮನವಿ ಪ್ರಾಧಿಕಾರ |
|---|---|---|---|
| ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಳ್ಳಾರಿ | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಳ್ಳಾರಿ | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಳ್ಳಾರಿ | ಜಂಟಿ ಸಾರಿಗೆ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ-585105, ದೂರವಾಣಿ – 08472-24805 |

ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ
ಪ್ರಾದೇಶಿಕ ಸಾರಿಗೆ ಅಧಿಕಾರಿ
ಬಳ್ಳಾರಿ – ಕೆಎ34